**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.</u>**

**<u>ಎಮ್ ವಿ ಸಿ ನಂಬರಃ 779/2021 ಮತ್ತು 780/2021</u>**

ಆರ್ ಡಬ್ಲ್ಯೂ – 1

| | | |
|---|---|---|
| **ಸಾಕ್ಷಿದಾರರ ಹೆಸರು** | : | ಡಾ ಶೇಖ್ ಮೈನುದ್ದೀನ್ |
| **ತಂದೆ/ಗಂಡನ ಹೆಸರು** | : | ಕೆ ಎಮ್ ಜಲಾಲ್ |
| **ವಯಸ್ಸು** | : | 36 ವರ್ಷ |
| **ಉದ್ಯೋಗ** | : | ತುರ್ತು ಚಿಕಿತ್ಸಾ ವೈದ್ಯಾಧಿಕಾರಿ |
| **ವಾಸ** | : | ಹುಬ್ಬಳ್ಳಿ |

**<u>ದಿನಾಂಕಃ 29-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎನ್ ಡಿ ವಕೀಲರಿಂದಃ</u>**

ನಾನು ಜನೇವರಿ 2017 ರಿಂದ ಜನೇವರಿ 2023 ರವರೆಗೆ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ ಮೆಗ್ಗಾನ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನು. ನಾನು ಎಮ್ ಬಿ ಬಿ ಎಸ್ ಒದಿರುತ್ತೇನೆ. ನ್ಯಾಯಾಲಯದ ಸಮನ್ಸ ಮೇರೆಗೆ ನಾನು ಅರ್ಜಿದಾರ ಧ್ರಾಕ್ಷಾಯಣಮ್ಮ ರವರಿಗೆ ಸಂಬಂದಪಟ್ಟ ಎಮ್ ಎಲ್ ಸಿ ಮೂಲ ರಿಜಿಸ್ಟರ್ ಎಕ್ಸಟ್ರಾಕ್ಟನ ಹಾಗೂ ಧ್ರಾಕ್ಷಾಯಣಮ್ಮ ರವರ ಎಕ್ಸರೆ ಮತ್ತು ಕೇಸ್ ಶೀಟನ್ನು ಹಾಜರುಪಡಿಸುತ್ತಿದ್ದೇನೆ. ಅರ್ಜಿದಾರರ ಒಳ ಮತ್ತು ಹೊರರೋಗಿ ರಜಿಸ್ಟರ್ ನ್ನು ತಾವು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯೂ 2019 ರಿಂದ ಡಿಜಿಟಲ್ ಆಗಿರುವುದರಿಂದ ಆ ರಿಜಿಸ್ಟರ್ ಗಳನ್ನು ಕಾಯ್ದಿರಿಸುವುದಿಲ್ಲ ಎಂದು ನುಡಿಯುತ್ತಾರೆ. ರೋಗಿಯ ಇತಿಹಾಸದ ಹಿನ್ನೆಲೆ ಹಾಗೂ ಚಿಕಿತ್ಸೆಯ ರಿಜಿಸ್ಟರ್ ಗಳು ಕೇಸ್ ಶೀಟ್ ಅಡಿಯಲ್ಲಿ ಬರುತ್ತದೆ. ಅರ್ಜಿದಾರ ಧ್ರಾಕ್ಷಾಯಣಮ್ಮ ರವರ patient progress sheet ನ್ನು ಹಾಜರುಪಡಿಸಿದ್ದೀರಾ ಎಂದರೆ ಒಳರೋಗಿಯಾದರೆ ಮಾತ್ರ ಹಾಜರುಪಡಿಸುತ್ತೇವೆ ಎಂದು ನುಡಿಯುತ್ತಾರೆ. ನರ್ಸ ಶೀಟ್ ಹಾಜರು ಮಾಡಿರುವುದಿಲ್ಲ. ಅರ್ಜಿದಾರರ Investigation report ಕೇಶ್ ಶೀಟ್ ನಲ್ಲಿ ಇರುತ್ತದೆ. ಎಕ್ಸರೆ 2019 ರಿಂದ ಡಿಜಿಟಲ್ ಆಗಿರುತ್ತದೆ. ನಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಮಾತ್ರ ಕೆಲಸ ಮಾಡುತ್ತೇನೆ. ರೋಗಿಯು ತುರ್ತು ಚಿಕಿತ್ಸಾ ವಿಭಾಗಕ್ಕೆ ಮೊದಲು ಬಂದಾಗ ಅವರಿಗೆ ಪ್ರಥಮ ಚಿಕಿತ್ಸೆ ಕೊಟ್ಟು ಅವರಿಗೆ ಮುಂದುವರೆದ ಚಿಕಿತ್ಸೆ ಅವಶ್ಯಕವಿದ್ದರೇ ಬೇರೆ ವಿಭಾಗಕ್ಕೆ ರೇಪರ್ ಮಾಡುತ್ತೇನೆ ಎಂದುನುಡಿಯುತ್ತಾರೆ. ನುರಿತ ವೈದ್ಯರು ಅವರಿಗೆ ಚಿಕಿತ್ಸೆಯನ್ನು ಕೊಡುತ್ತಾರೆ. ಸದರಿ ವೈದ್ಯರೇ ರೋಗಿಯ ಕೇಸ್ ಶೀಟ್ ನ್ನು ನೋಡಿಕೊಳ್ಳುತ್ತಾರೆ. ಯಾರು ಚಿಕಿತ್ಸೆ ಕೊಡುತ್ತಾರೆ, ಅವರೇ ಡಿಸ್ಚಾರ್ಜ ಸಮ್ಮರಿ ಕೊಡುತ್ತಾರೆ.

ಆರ್ ಡಬ್ಲ್ಯೂ-1

ಅರ್ಜಿದಾರರಿಗೆ ನಾನು ಡಿಸ್ಚಾರ್ಜ ಸಮ್ಮರಿಯನ್ನು ಕೊಟ್ಟಿರುವುದಿಲ್ಲ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ.

ಸಾಕ್ಷಿಯೂ ಎಮ್ ಎಲ್ ಸಿಯ ಮೂಲ ರಿಜಿಸ್ಟರ್ ನ್ನು ಹಾಜರುಪಡಿಸಿದ್ದು ಅದನ್ನು ದೃಡೀಕೃತ ನಕಲಿನ ಜೊತೆ ತಾಳೆ ಮಾಡಿ ನೋಡಿ ಅದು ಒಂದಕ್ಕೊಂದು ಹೋಲಿಕೆಯಾಗಿ ಸರಿಯಾಗಿರುವುದರಿಂದ ಆಡಳಿತಾತ್ಮಕ ದೃಷ್ಠಿಯಿಂದ ಮೂಲ ಎಮ ಎಲ್ ಸಿ ರಿಜಿಸ್ಟರ್ ನ್ನು ಹಿಂದುರುಗಿಸಿ ದೃಡೀಕೃತ ನಕಲನ್ನು ನಿ ಆರ್ -1 ಎಂದು, ಕೇಸ್ ಶೀಟ್ ನ್ನು ನಿ ಆರ್ -2 ಎಂದು, ಎಕ್ಸರೆಯನ್ನು ನಿ ಆರ್ -3 ಎಂದು ಗುರುತಿಸಲಾಯಿತು. ನಿ ಆರ್ -2 ದಲ್ಲಿ ನನ್ನ ಸಹಿ ಇರುವುದಿಲ್ಲ.

## ಎಮ್ ವಿ ಸಿ ನಂ.780/2021

ನಾನು ಅರ್ಜಿದಾರ ಲಲಿತಮ್ಮ ರವರಿಗೆ ಸಂಬಂದಪಟ್ಟ ಎಮ್ ಎಲ್ ಸಿ ಮೂಲ ರಿಜಿಸ್ಟರ್ ಎಕ್ಸಟ್ರಾಕ್ಟನ ಹಾಗೂ ಲಲಿತಮ್ಮ ರವರ ಎಕ್ಸರೆ ಮತ್ತು ಕೇಸ್ ಶೀಟನ್ನು ಹಾಜರುಪಡಿಸುತ್ತಿದ್ದೇನೆ. ಅರ್ಜಿದಾರರ ಒಳ ಮತ್ತು ಹೊರರೋಗಿ ರಜಿಸ್ಟರ್ ನ್ನು ತಾವು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯೂ 2019 ರಿಂದ ಡಿಜಿಟಲ್ ಆಗಿರುವುದರಿಂದ ಆ ರಿಜಿಸ್ಟರ್ ಗಳನ್ನು ಕಾಯ್ದಿರಿಸುವುದಿಲ್ಲ ಎಂದು ನುಡಿಯುತ್ತಾರೆ. ರೋಗಿಯ ಇತಿಹಾಸದ ಹಿನ್ನೆಲೆ ಹಾಗೂ ಚಿಕಿತ್ಸೆಯ ರಿಜಿಸ್ಟರ್ ಗಳು ಕೇಸ್ ಶೀಟ್ ಅಡಿಯಲ್ಲಿ ಬರುತ್ತದೆ. ಅರ್ಜಿದಾರ ಲಲಿತಮ್ಮ ರವರ patient progress sheet ನ್ನು ಹಾಜರುಪಡಿಸಿದ್ದೀರಾ ಎಂದರೆ ಒಳರೋಗಿಯಾದರೆ ಮಾತ್ರ ಹಾಜರುಪಡಿಸುತ್ತೇವೆ ಎಂದು ನುಡಿಯುತ್ತಾರೆ. ನರ್ಸ ಶೀಟ್ ಹಾಜರು ಮಾಡಿರುವುದಿಲ್ಲ. ಅರ್ಜಿದಾರರ Investigation report ಕೇಶ್ ಶೀಟ್ ನಲ್ಲಿ ಇರುತ್ತದೆ. ಎಕ್ಸರೆ 2019 ರಿಂದ ಡಿಜಿಟಲ್ ಆಗಿರುತ್ತದೆ. ನಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಮಾತ್ರ ಕೆಲಸ ಮಾಡುತ್ತೇನೆ. ರೋಗಿಯು ತುರ್ತು ಚಿಕಿತ್ಸಾ ವಿಭಾಗಕ್ಕೆ ಮೊದಲು ಬಂದಾಗ ಅವರಿಗೆ ಪ್ರಥಮ ಚಿಕಿತ್ಸೆ ಕೊಟ್ಟು ಅವರಿಗೆ ಮುಂದುವರೆದ ಚಿಕಿತ್ಸೆ ಅವಶ್ಯಕವಿದ್ದರೇ ಬೇರೆ ವಿಭಾಗಕ್ಕೆ ರೇಪರ್ ಮಾಡುತ್ತೇನೆ ಎಂದುನು ಡಿಯುತ್ತಾರೆ. ನುರಿತ ವೈದ್ಯರು ಅವರಿಗೆ ಚಿಕಿತ್ಸೆಯನ್ನು ಕೊಡುತ್ತಾರೆ. ಸದರಿ ವೈದ್ಯರುಗಳಿಗೆ ರೋಗಿಯ ಕೇಸ್ ಶೀಟ್ ನ್ನು ನೋಡಿಕೊಳ್ಳುತ್ತಾರೆ. ಯಾರು ಚಿಕಿತ್ಸೆ ಕೊಡುತ್ತಾರೆ ಅವರೇ ಡಿಸ್ಚಾರ್ಜ ಸಮ್ಮರಿ ಕೊಡುತ್ತಾರೆ. ಅರ್ಜಿದಾರರಿಗೆ ನಾನು ಡಿಸ್ಚಾರ್ಜ ಸಮ್ಮರಿಯನ್ನು ಕೊಟ್ಟಿರುವುದಿಲ್ಲ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ.

ಸಾಕ್ಷಿಯೂ ಎಮ್ ಎಲ್ ಸಿಯ ಮೂಲ ರಿಜಿಸ್ಟರ್ ನ್ನು ಹಾಜರುಪಡಿಸಿದ್ದು ಅದನ್ನು ದೃಡೀಕೃತ ನಕಲಿನ ಜೊತೆ ತಾಳೆ ಮಾಡಿ ನೋಡಿ ಅದು ಒಂದಕ್ಕೊಂದು ಹೋಲಿಕೆಯಾಗಿ

ಸರಿಯಾಗಿರುವುದರಿಂದ ಆಡಳಿತಾತ್ಮಕ ದೃಷ್ಟಿಯಿಂದ ಮೂಲ ಎಮ ಎಲ್ ಸಿ ರಿಜಿಸ್ಟರ್ ನ್ನು ಹಿಂದುರುಗಿಸಿ ಸದರಿ ಎಮ್ ಎಲ್ ಸಿಯ ದೃಡೀಕೃತ ನಕಲನ್ನು ನಿ ಆರ್ -4 ಎಂದು, ಕೇಸ್ ಶೀಟ್ ನ್ನು ನಿ ಆರ್ -5 ಎಂದು, 2 ಎಕ್ಸರೆಗಳನ್ನು ಒಟ್ಟಾಗಿ ನಿ ಆರ್ -6 ಎಂದು ಗುರುತಿಸಲಾಯಿತು. ನಿ ಆರ್ -5 ದಲ್ಲಿ ನನ್ನ ಸಹಿ ಇರುವುದಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಮ್ ಎಸ್ ಎ ವಕೀಲರಿಂದಃ**

ಕೇಸ್ ಶೀಟ್ ನಲ್ಲಿ ನರ್ಸ ಶೀಟ್ ಇದೆ ಎಂದರೆ ನೋಟ್ಸ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಅರ್ಜಿದಾರರ ಗಾಯದ ಪ್ರಮಾಣ ಪತ್ರಗಳನ್ನು ನಾನೇ ನೀಡಿದ್ದು ಅವುಗಳಿಗೆ ನಾನೇ ಸಹಿ ಹಾಕಿರುತ್ತೇನೆ ಎಂದರೆ ಸರಿ. ಅರ್ಜಿದಾರರು ಒಳರೋಗಿಯಾಗಿ ಎನು ಚಿಕಿತ್ಸೆ ಪಡೆದಿದ್ದಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಕೇಶ್ ಶೀಟ್ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಡಿಸ್ಚಾರ್ಜ ಸಮ್ಮರಿಯನ್ನು ನೋಡಿ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.